## ಟಿಪ್ಪುವಿನ ಫಿರಂಗಿ ಮನೆ ಅನಾಥ



ದಕ್ಷಿಣ ಕನ್ನಡ ಜಿಲ್ಲೆಯ ಬೆಳ್ತಂಗಡಿ ತಾಲ್ಲೂಕಿನ ಗಡಾಯಿಕಲ್ಲು ಈ ಹಿಂದೆ ಮೈಸೂರಿನ ಹುಲಿ ಎಂದೇ ಪ್ರಖ್ಯಾತನಾದ ಟಿಪ್ಪು ಸುಲ್ತಾನ್ ಆಳ್ವಿಕೆ ಒಳಪಟ್ಟ ಪ್ರದೇಶವಾಗಿತ್ತು. ಎತ್ತರದ ಕೋಟೆ ಪ್ರದೇಶದಲ್ಲಿ ಟಿಪ್ಪು ಶಸ್ತ್ರಾಸ್ತ್ರ ಸಂಗ್ರಹಿಸಿದ್ದ ಫಿರಂಗಿ ಮನೆಯಿದೆ. ಸರ್ಕಾರದ ನಿರ್ಲಕ್ಷ್ಯದಿಂದ ಶಿಥಿಲವಾಗುತ್ತಿದೆ.

ಟಿಪ್ಪು 1794ರಲ್ಲಿ ಫ್ರೆಂಚ್ ತಂತ್ರಜ್ಞಾನ ಬಳಸಿ ಕೋಟೆ ನಿರ್ಮಿಸಿದ ಎನ್ನಲಾಗಿದೆ. ಸಮುದ್ರ ಮಟ್ಟದಿಂದ ಸುಮಾರು 1700 ಅಡಿ ಎತ್ತರದಲ್ಲಿದೆ. ಇಲ್ಲಿ ಮದ್ದು, ಗುಂಡುಗಳನ್ನು ಸಂಗ್ರಹಿಸಿಡಲಾಗುತ್ತಿತ್ತು ಎಂದು ಇತಿಹಾಸ ಹೇಳುತ್ತವೆ. ಟಿಪ್ಪು ಸೋತ ಬಳಿಕ ಈ ಪ್ರದೇಶ ಬ್ರಿಟಿಷರ ವಶವಾಯಿತು.

ಈಗ ಅರಣ್ಯ ಇಲಾಖೆ ವ್ಯಾಪ್ತಿಗೆ ಬರುವ ಈ ಕೋಟೆಯ ನಿರ್ವಹಣೆಯನ್ನು ಪ್ರಾಚ್ಯವಸ್ತು ಸಂಗ್ರಹಾಲಯ ನಿರ್ವಹಿಸುತ್ತದೆ. ನಿರ್ಲಕ್ಷ್ಯದಿಂದ ಜೀರ್ಣಾವಸ್ಥೆ ತಲುಪಿದೆ.

—ಅರುಣ್ ಕಿಲ್ಲೂರು



## ಹಸಿರು ಮನೆ

ಬಾಗಲಕೋಟೆಯ ವಿದ್ಯಾಗಿರಿಯ ಪಕ್ವಾನ್ ಹೋಟೆಲ್‌ಗೆ ಜೂನ್‌ನಲ್ಲಿ ಭೇಟಿ ಕೊಟ್ಟರೆ ಅಚ್ಚರಿಯೊಂದು ಕಾದಿರುತ್ತದೆ. ಹೌದು! ಕೇವಲ ಟೀ ಕುಡಿದರೂ ಸಾಕು ಬಿಲ್ ಜೊತೆಗೆ ನಿಮಗೆ ಉಚಿತವಾಗಿ ಸಸಿಯೊಂದನ್ನು ನೀಡಿ ‘ನಿಮ್ಮ ಮನೆಯಂಗಳದಲ್ಲಿ ಇಲ್ಲವೇ ಮನೆಯ ಸುತ್ತಮುತ್ತ ನೆಟ್ಟು ಪೋಷಿಸಿ ಎಂಬ ಮನವಿ’ ಎಂಬ ಮನವಿ ಕೇಳುತ್ತೀರಿ.

ಮನೆಗೆ ತರಿಸಿಕೊಳ್ಳುವ ಗ್ರಾಹಕರಿಗೂ ಪಾರ್ಸೆಲ್ ಜೊತೆಗೆ ಒಂದು ಸಸಿ ನೀಡುತ್ತಾರೆ. ನಿತ್ಯ ಅಡುಗೆಗೆ ಬಳಸುವ ಹುಣಸೆ, ನಿಂಬೆ, ನುಗ್ಗೆ, ಕರಿಬೇವು ಇಲ್ಲವೇ ಸೀತಾಫಲ, ಮಾವು, ಪೇರಲ, ಬೇವು ಹಾಗೂ ಬಾದಾಮಿ ಸಸಿಗಳನ್ನು ಕೊಡುತ್ತಾರೆ. ವಿಶ್ವ ಪರಿಸರ ದಿನದ ಅಂಗವಾಗಿ ಜೂನ್ 5 ರಿಂದ ಜುಲೈ 5ರವರೆಗೆ ಮೂರು ವರ್ಷದಿಂದ ನೀಡುತ್ತಾ ಬಂದಿದ್ದಾರೆ.

—ಚಂದ್ರಕಾಂತ ಮ. ತಾಳಿಕೋಟಿ

## ಅನಾನಸ್ ಸಲಾಮ್!

ಕೊರೊನಾ ಬದುಕನ್ನು ಅಲ್ಲೋಲಕಲ್ಲೋಲ ಮಾಡಿದೆ. ಅನೇಕರು ಕೆಲಸ ಕಳೆದುಕೊಂಡರು. ಬದಲಾದ ಪರಿಸ್ಥಿತಿಗೆ ಹೊಂದಿಕೊಳ್ಳ ಬೇಕಾದದ್ದು ಇಂದಿನ ಅಗತ್ಯ ಮತ್ತು ಅನಿವಾರ್ಯತೆ ಎಂಬುದನ್ನು ಮರೆಯಬಾರದು. ವಾಸ್ತವ ಹೀಗಿರುವಾಗ ಸಂತಸದ ಹಾಗೂ ಹೆಮ್ಮೆಯ ಸಂಗತಿಯೊಂದು ನನ್ನ ಅನುಭವಕ್ಕೆ ಬಂತು.

ಅಂದು ನಾನು ಯಲ್ಲಾಪುರದಿಂದ ರಾಷ್ಟ್ರೀಯ ಹೆದ್ದಾರಿ 63ರಲ್ಲಿ ಅಂಕೋಲಾಕ್ಕೆ ಸಾಗುತ್ತಿದ್ದೆ. ಮೂಲಮನೆ ಎಂಬಲ್ಲಿ ಅನಾನಸ್ ಹಣ್ಣುಗಳನ್ನು ರಸ್ತೆಯ ಪಕ್ಕದಲ್ಲಿ ಮಾರಾಟ ಮಾಡುತ್ತಿದ್ದ ಯುವಕ ಗಮನ ಸೆಳೆದ. ನಮ್ಮ ಕಾರಿನ ಚಾಲಕ ಶಫಿಶೇಖ್ ಚೌಕಾಸಿ ಮಾಡಿ ಅನಾನಸ್ ಕೊಂಡು ಕೊಂಡ.

ಆ ಅನಾನಸ್ ಮಾರುತ್ತಿದ್ದ ಹುಡುಗ ಪ್ರತಿಷ್ಠಿತ ಕಾಲೇಜಿನಲ್ಲಿ ಉತ್ತಮ ಅಂಕಗಳೊಂದಿಗೆ ಬಿ.ಇ. ಮುಗಿಸಿ ಬೆಂಗಳೂರಿನ ಹೆಸರಾಂತ ಕಂಪನಿಯಲ್ಲಿ ನೌಕರಿಯಲ್ಲಿದ್ದವರು. ಸದ್ಯ ಮನೆ ಸೇರಿದ್ದಾರೆ. ಮನೆಯಲ್ಲಿ ಬೆಳದ ಅನಾನಸನ್ನು ಮಾರಾಟ ಮಾಡುತ್ತಿದ್ದಾರೆ. ಅವರು ಅಂಕೋಲಾ ತಾಲ್ಲೂಕಿನ ಮೂಲೇಮನೆ ನಿವಾಸಿ ನಾಗೇಂದ್ರ ರಾಮಚಂದ್ರ ಗಾಂವಕರ.

—ಬೀರಣ್ಣ ನಾಯಕ ಮೊಗಟಾ

